ಪುಸ್ತಕವಿದ್ದರೆ ಕೊಡಿರೆಂದು ನಮ್ಮನ್ನು ಕೇಳಿದರು. ಆದರೆ ಆಗ ಅದು ನಮ್ಮಲ್ಲಿರಲಿಲ್ಲ. ಆದರೆ ದಿವ್ಯತ್ರಯರಿದ್ದ ಒಂದು ಚಿತ್ರಪಟವನ್ನೂ ಮತ್ತು ಅವರ ಉಪದೇಶಗಳಿದ್ದ ಒಂದು ಕರಪತ್ರವನ್ನೂ ಅವರಿಗೆ ಕೊಟ್ಟೆವು. ಅವನ್ನು ಭಕ್ತಿಯಿಂದ ಎದೆಗೊತ್ತಿಕೊಂಡು ತಮ್ಮ ಜೇಬಿನಲ್ಲಿಟ್ಟುಕೊಂಡರು. ವಿಜಯವಾಡದಿಂದ ಗೌಹಾತಿಗೆ ಹಿಂತಿರುಗುವಾಗ ಹೌರಾದಲ್ಲಿಳಿದು ಬೇಲೂರು ಮಠ ಸಂದರ್ಶಿಸಿ ಹೋಗುವೆವೆಂದು ಹೇಳಿದರು. ಬೆಳಿಗಿನ ಜಾವ ೪.೩೦ಕ್ಕೆ ವಿಜಯವಾಡ ಬಂದಾಗ ಅವರು ನಮ್ಮಿಂದ ಬೀಳ್ಕೊಂಡರು.

ಇದೇ ಜೀವನದ ಪಯಣ, ನಮ್ಮ ಕಾಲ ತುಂಬಿಬಂದಾಗ ನಾವೂ ಹೀಗೆಯೇ ನಮ್ಮ ನೆಂಟರಿಷ್ಟರೆಲ್ಲರನ್ನೂ ಬಿಟ್ಟು ಇಳಿದು ಹೋಗುವುದು ತಾನೇ ಎಂದು ಮನಸ್ಸಿಗನಿಸುತ್ತಿತ್ತು. ಕೊನೆಗೆ ರೈಲು ಬೆಂಗಳೂರು ತಲುಪಿದಾಗ ನಮ್ಮ ದಾರಿ ನಾವು ಹಿಡಿದೆವು. ಪವಿತ್ರ ಯಾತ್ರೆಯನ್ನು ಮುಗಿಸಿ ಹಿಂದಿರುಗಿದ ಮನಸ್ಸಿಗೆ ಏನೋ ಒಂದು ರೀತಿಯ ನೆಮ್ಮದಿ ಪ್ರಸನ್ನತೆ ಇತ್ತು. ಇಂತಹ ಪವಿತ್ರವಾದ ಯಾತ್ರೆ ಶ್ರೀರಾಮಕೃಷ್ಣರ, ಶ್ರೀಮಾತೆ ಶಾರದಾದೇವಿಯವರ ಮತ್ತು ಸ್ವಾಮಿ ವಿವೇಕಾನಂದರ ಕೃಪೆಯಿಂದ ಯಶಸ್ವಿಯಾಯಿತು. ಅವರ ಕೃಪೆಯೇ ಈ ಜೀವನ ಯಾತ್ರೆಯನ್ನೂ ಯಶಸ್ವಿಗೊಳಿಸುವುದೆಂಬ ತುಂಬು ಭರವಸೆಯಿಂದ ಈ ಪ್ರವಾಸಕಥನವನ್ನು ಮುಗಿಸುತ್ತೇನೆ. ❄

# ಜಗತ್ತೆಲ್ಲ ನಿನ್ನದೇ

**ಗಿರಿಜಾದೇವಿ**

**ಶ್ರೀಮಾತೆ ಶಾರದಾದೇವಿಯವರ ಪ್ರಸಿದ್ಧ ಉಪದೇಶವೊಂದನ್ನು ಭಗವದ್ಗೀತೆಯ ಬೋಧನೆಯೊಂದಿಗೆ ಹೋಲಿಸಿ ವಿಶ್ಲೇಷಣೆ ನಡೆಸಿರುವ ಶ್ರೀಮತಿ ಗಿರಿಜಾದೇವಿಯವರು ಮೈಸೂರಿನಲ್ಲಿರುವ ಶ್ರೀರಾಮಕೃಷ್ಣ ಆಶ್ರಮದ ನಿಕಟ ಭಕ್ತರು.**

"**ನಿನಗೆ ಮನಶ್ಶಾಂತಿ** ಬೇಕಿದ್ದರೆ ಇತರರಲ್ಲಿ ತಪ್ಪುಗಳನ್ನು ಹುಡುಕಬೇಡ. ಬದಲಾಗಿ ನಿನ್ನ ತಪ್ಪುಗಳನ್ನೇ ನೋಡಿಕೋ. ಪ್ರಪಂಚವನ್ನೆಲ್ಲ ನಿನ್ನದಾಗಿಸಿಕೊಳ್ಳುವುದನ್ನು ಕಲಿ. ಇಲ್ಲಿ ಯಾರೂ ಪರರಲ್ಲ. ಒಟ್ಟು ಪ್ರಪಂಚವೇ ನಿನ್ನ ಸ್ವಂತದ್ದಾಗಿದೆ." ಇದು ಶ್ರೀಮಾತೆ ಶಾರದಾದೇವಿಯವರ ನಲ್ನುಡಿ, ಅಂತಿಮ ಅಮರ ಸಂದೇಶ.

ವೇದೋಪನಿಷತ್ತುಗಳಲ್ಲಿ ಭಗವತ್‌ಸಾಕ್ಷಾತ್ಕಾರಕ್ಕೆ ಸಂಬಂಧಿಸಿದ ಕಷ್ಟಸಾಧ್ಯವಾದ ಪ್ರಕ್ರಿಯೆಗಳನ್ನೆಲ್ಲ ಕ್ರೋಡೀಕರಿಸಿ ಸಾಮಾನ್ಯವಾದ ಆಡುಭಾಷೆಯಲ್ಲಡಗಿಸಿ ಉಪದೇಶಿಸಿದ್ದಾರೆ ಶ್ರೀಮಾತೆಯವರು. ಭಗವತ್ ಸಾಕ್ಷಾತ್ಕಾರವೇ ಮಾನವ ಜೀವನದ ಪರಮೋದ್ದೇಶ ಎಂದು ಸಾರುತ್ತ, ಬದುಕಿನ ಪ್ರತಿಯೊಂದು ಕ್ಷಣವೂ ಭಗವದ್ವಿಷಯಗಳನ್ನೇ ಬೋಧಿಸುತ್ತಿದ್ದ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಸಹಧರ್ಮಿಣಿಯಾದ ಶ್ರೀಮಾತೆಯವರಿಗೆ ತಿಳಿದಿತ್ತು, ಒಂದಿಷ್ಟು ಅಭ್ಯಾಸದಿಂದ ಜನಸಾಮಾನ್ಯರೂ ತಮ್ಮ ಈ ಸಂದೇಶವನ್ನು ಸುಲಭವಾಗಿ ತಮ್ಮದಾಗಿಸಿಕೊಳ್ಳಬಹುದು, ತತ್ಫಲವಾಗಿ ಆತ್ಮಸಾಕ್ಷಾತ್ಕಾರ ದ್ವಾರಾ ಪರಮಶಾಂತಿಯನ್ನು ಪಡೆದುಕೊಳ್ಳಬಹುದು ಎಂದು.

ಶ್ರೀಮಾತೆಯವರೇನೋ ಇಲ್ಲಿ ಅಪರಿಚಿತರಾರೂ ಇಲ್ಲ ಅಂದಿದ್ದಾರೆ. ಆದರೆ ಎಷ್ಟೋ ಸಂದರ್ಭಗಳಲ್ಲಿ ನಮ್ಮ ಮನೆಯ ಸುತ್ತಮುತ್ತಲಿನವರೇ ನಮಗೆ ಅಪರಿಚಿತರಿರುತ್ತಾರಲ್ಲ, ಇನ್ನು ಪ್ರಪಂಚದ ಬಗ್ಗೆ ಹೇಳುವುದೇನಿದೆ ಎನ್ನುವ ಸಂದೇಹ ಬರುವುದು ಸಹಜವೇ. ಗೂಢವಾದ ಅಂತರಾತ್ಮನ ವಿಚಾರವಾಗಲಿ ಅಥವಾ ಬೇರಾವುದೆ ವಿಷಯವಾಗಲಿ ಚಿಂತನ ಮಂಥನ ಮಾಡದೆ ಇಂಗಿತಾರ್ಥ ಸ್ಪಷ್ಟವಾಗಲಾರದು. ಹಾಗೆಯೇ ಇಲ್ಲಿ ಶ್ರೀಮಾತೆಯವರ ಮಾತಿನ ವಾಚ್ಯಾರ್ಥವನ್ನು ಬಿಟ್ಟು ಲಕ್ಷ್ಯಾರ್ಥವನ್ನು ಗ್ರಹಿಸಿ, ಅದರಂತೆ ನಡೆದು ನಮ್ಮ ಉದ್ಧಾರಮಾಡಿಕೊಳ್ಳಬೇಕಿದೆ. ವೇದೋಪನಿಷತ್ತುಗಳ ಸಾರವೆನಿಸಿರುವ ಭಗವದ್ಗೀತೆಯಲ್ಲಿ ಶ್ರೀಮಾತೆಯವರ ಈ ಸಂದೇಶಕ್ಕೆ ವಿಪುಲವಾದ ವಿವರಗಳು ಲಭ್ಯ. ಅದರ ಏಳನೇ ಅಧ್ಯಾಯದಲ್ಲಿ ಭಗವಂತ ಹೀಗೆ ಹೇಳುತ್ತಾನೆ:

**ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ |**
**ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ||** (7.7)

ಸೃಷ್ಟಿರಚನೆಯ ಬಗ್ಗೆ ಹೇಳುತ್ತಾ, ಪರಮಾತ್ಮನಾದ ತನಗಿಂತ ಭಿನ್ನ ಪದಾರ್ಥವೇ ಇಲ್ಲ, ಚರಾಚರಾತ್ಮಕವಾದ ಸೃಷ್ಟಿ ಎಲ್ಲವೂ, ವಿವಿಧ ರೀತಿಯ ಮಣಿಗಳನ್ನು ಸೂತ್ರದಲ್ಲಿ ಪೋಣಿಸಿದಂತೆ, ತನ್ನನ್ನೇ ಆಧರಿಸಿದೆ ಎಂದು ಗೋಚರ ಸೃಷ್ಟಿಯ ಅಗೋಚರ ಆಧಾರದ ಬಗ್ಗೆ ಸ್ಪಷ್ಟಪಡಿಸುತ್ತಾನೆ ಭಗವಂತ. ನಾವೂ ಭಗವದ್ಭಾವವನ್ನು ಪಡೆದಾಗ ಎಲ್ಲರೂ ನಮ್ಮವರೇ, ಯಾರೂ ಪರರೆನಿಸುವುದಿಲ್ಲ.

ವಿನ್ಯಾಸಪೂರ್ಣವಾಗಿ ವಿವಿಧ ಬಣ್ಣದ ಹೂಗಳನ್ನು ಮಾಲೆಯಾಗಿ ಹೆಣೆದಾಗ ಅದರ ಅಂದಕ್ಕೆ ಆಕರ್ಷಿತರಾಗುತ್ತೇವೆಯೆ ಹೊರತು, ಆಧಾರವಾದ ದಾರದತ್ತ ನಮ್ಮ ಗಮನ ಹೋಗುವುದೇ ಇಲ್ಲ. ಹೂಗಳು ಬಾಡಿ ಉದುರಿದರೂ ದಾರ ಮಾತ್ರ ಹಾಗೇ ಉಳಿಯುತ್ತದೆ. ಅಂತೆಯೆ ತ್ರಿಗುಣಾತ್ಮಿಕೆಯಾದ ಪ್ರಕೃತಿಯ ಬೆಡಗಿಗೆ ಮಾರುಹೋಗಿ, ಆಧಾರಭೂತವಾದ ಪರಮಪುರುಷನನ್ನು ಮರೆಯುತ್ತೇವೆ. ಇಂದ್ರಿಯಗೋಚರವಾದ ನಾಮ-ರೂಪಾತ್ಮಕ ಜಗತ್ತನ್ನೇ ಸತ್ಯವೆಂದು ಭ್ರಮಿಸುತ್ತೇವೆ. ನಿತ್ಯಾನಿತ್ಯವಸ್ತುವಿವೇಕದ ಅಭಾವದಿಂದುಂಟಾದ ಅಜ್ಞಾನ ಸ್ಥಿತಿ ಇದು. ಪಂಚಭೂತಾತ್ಮಕವಾದ ಷಡ್ವಿಕಾರಗಳಿಂದ ಕೂಡಿದ ಈ ಶರೀರವೇ ನಾನಾಗಿದ್ದೇನೆ ಎಂಬ ಮರುಳುಪಾಠವನ್ನು ಇಂದ್ರಿಯಗಳು ಬೋಧಿಸುತ್ತವೆ. ಮನಸ್ಸು ಇದನ್ನೇ ನಂಬಿ ಇಂದ್ರಿಯಗಳ ಬೆನ್ನ ಹಿಂದೆ ಓಡುವುದನ್ನು ಅಭ್ಯಾಸ ಮಾಡಿಕೊಂಡು, ಜೀವಿಯನ್ನು ಪರಮಾತ್ಮನಿಗೆ ವಿಮುಖಿಗೊಳಿಸಿ ಜನನಮರಣ ಚಕ್ರದಲ್ಲಿ ಸಿಕ್ಕಿಸಿ ನರಳುವಂತೆ ಮಾಡುತ್ತದೆ. ಇಂತಹ ಮನಸ್ಸನ್ನು ಬ್ರಹ್ಮಾಕಾರವಾಗಿ ಪಳಗಿಸಬೇಕಾಗಿದೆ. ಇಂದ್ರಿಯಗಳು ಅನುಭವಿಸಿ

ರಮಿಸುವ ಭೋಗಗಳ ಹಿಂದಿರುವ ದುಃಖಗಳ ಬಗ್ಗೆ ತಿಳುವಳಿಕೆ ನೀಡಬೇಕಾಗಿದೆ ಮನಸ್ಸಿಗೆ. ದೇಹಭಾವನೆಯ ಕಾರಣದಿಂದಾಗಿ ಮನಸ್ಸು ಸ್ಥೂಲವಾಗಿ ಪರಿಮಿತವಾಗುತ್ತದೆ. ಇದೇ ಮನಸ್ಸು ಸೂಕ್ಷ್ಮವೂ ವಿಶಾಲವೂ ಆಗುತ್ತ ಹೋದಂತೆ ಸೃಷ್ಟಿಯ ಹಿಂದಿನ ಪರಬ್ರಹ್ಮ ವಸ್ತುವೇ ತಾನೆಂಬ ಅರಿವು ಮೂಡುತ್ತದೆ. ಹೀಗೆ ಮನಸ್ಸು ವಿಶಾಲವಾದಾಗ ಪರತನ ಹೊರಟುಹೋಗುತ್ತದೆ.

ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್।
ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥

*ಇವನು ನನ್ನವನು ಅವನು ಪರ ಎಂಬ ಪರಿಗಣನೆ ಕ್ಷುದ್ರ ಮನಸ್ಸಿಗೆ ಸೇರಿದುದು. ಉದಾರ ಸ್ವಭಾವದವರಿಗೆ ಇಡೀ ಭೂಮಿಯೇ ಒಂದು ಕುಟುಂಬ.*

ನಾಮರೂಪಾತ್ಮಕವಾದ ಸ್ಥಾಯಿಯಲ್ಲದ ಸೃಷ್ಟಿಯ ಹಿಂದಿರುವ ಪರಮಾತ್ಮನ ವ್ಯಾಪಕತೆಯನ್ನು ಅನುಭವಿಸುವುದನ್ನು ಅಭ್ಯಾಸ ಮಾಡುವುದೇ ಆಧ್ಯಾತ್ಮಿಕ ಸಾಧನೆ. ಜೀವೋ ಬ್ರಹ್ಮೈವ ನಾ ಪರಃ, ತತ್ ತ್ವಂ ಅಸಿ, ಸರ್ವಂ ಖಲ್ವಿದಂ ಬ್ರಹ್ಮ, ಅಹಂ ಬ್ರಹ್ಮಾಸ್ಮಿ ಎಂದು ವೇದಗಳು ಘೋಷಿಸಿವೆ. ಇದನ್ನು ನಮ್ಮ ಸ್ವಂತ ಅನುಭವಕ್ಕೆ ತಂದುಕೊಳ್ಳಲು ಸದ್ಗುರುವಿನಲ್ಲಿ ಮೊರೆ ಹೋಗಬೇಕು. ಈ ಬಗ್ಗೆ ಶ್ರವಣ ಮಾಡಿ ನಿಷ್ಠಾಪೂರ್ವಕ ಸ್ವಾಧ್ಯಾಯ ನಡೆಸಿ ನಿದಿಧ್ಯಾಸನ ಮಾಡಿದಾಗ ಜೀವ ಬ್ರಹ್ಮ ಏಕತೆಯ ಪರೋಕ್ಷಜ್ಞಾನವನ್ನು ಪ್ರಾಪ್ತಿಸಿಕೊಳ್ಳಬಹುದು. ಇದನ್ನು ಅಪರೋಕ್ಷಜ್ಞಾನವಾಗಿಸಿಕೊಳ್ಳುವುದಕ್ಕೆ ಮಾತ್ರ ಕಠಿಣ ತಪಸ್ಸಿನ ಅಗತ್ಯವಿದೆ. ಹೆದರುವುದು ಬೇಡ. ಕಾಡಿಗೆ ಹೋಗಿ ಒಂಟಿಕಾಲಲ್ಲಿ ನಿಲ್ಲುವ ಶ್ರಮದಾಯಕ ತಪಸ್ಸು ಕಲಿಯುಗಕ್ಕಲ್ಲ ಎಂದು ಶಾಸ್ತ್ರಕಾರರು ಹೇಳಿದ್ದಾರೆ. ಮನಸ್ಸನ್ನು ಇಂದ್ರಿಯಗಳ ಹಿಂದೆ ದೌಡಾಯಿಸದಂತೆ ತಡೆಯುವುದೇ ಒಂದು ತಪಸ್ಸು, ಸಾಧನೆ.

ಒಂದನ್ನು ಬಯಸಿದರೆ ಮತ್ತೊಂದನ್ನು ತ್ಯಾಗಮಾಡಲೇಬೇಕು. ಇದು ಪ್ರಕೃತಿ ನಿಯಮ. ಕೆಳಗಿನ ಮೆಟ್ಟಲನ್ನು ತ್ಯಾಗಮಾಡಿಯೇ ಮೇಲಿನ ಮೆಟ್ಟಲನ್ನು ಹತ್ತಬೇಕಾಗುತ್ತದೆ. ಅನಾತ್ಮವಸ್ತುಗಳು ನೀಡುವ ಅಲ್ಪ ಸುಖಗಳತ್ತ ಧಾವಿಸುವ ಮನಸ್ಸನ್ನು ಸದಸದ್ ವಿವೇಕವೆಂಬ ಹಗ್ಗದಿಂದ ಎಳೆದುಕಟ್ಟಿ ಇಂದ್ರಿಯಗಳು ವಿಷಯಗಳನ್ನು ಪ್ರವೇಶಿಸದಂತೆ ನಿಗ್ರಹಿಸಿದಾಗ ಅಕ್ಷಯವಾದ ಅವಿಚ್ಛಿನ್ನವಾದ ಆತ್ಮಾನಂದವನ್ನು ಅನುಭವಿಸಬಹುದು ಎನ್ನುವುದು ಭಗವದ್ಗೀತೆ ನೀಡುವ ದಿವ್ಯ ಭರವಸೆ. ಗೀತಾಚಾರ್ಯನಾದ ಶ್ರೀಕೃಷ್ಣನ ಬಂಧುವೂ ಸಖನೂ ಶಿಷ್ಯನೂ ಶೂರನೂ ಸತ್ವಗುಣಸಂಪನ್ನನೂ ಆದ ಅರ್ಜುನನೇ ಚಂಚಲತೆಯಿಂದ ಕೂಡಿದ ಕ್ಷೋಭೆಯನ್ನುಂಟು ಮಾಡುವಂಥ ಬಲವಾದ ದೃಢವಾದ ಮನಸ್ಸನ್ನು ತಡೆದು ನಿಲ್ಲಿಸುವುದು ಹೇಗೆ ಎಂದು ಖಿನ್ನನಾದಾಗ, ಭಗವಂತ ಅವನು ಹೇಳಿದ್ದನ್ನೆಲ್ಲ ಒಪ್ಪಿಕೊಳ್ಳುತ್ತಾ, ಸತತ ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಇಂತಹ ಮನಸ್ಸನ್ನೂ ಸ್ವಾಧೀನಪಡಿಸಿಕೊಳ್ಳಲು ಸಾಧ್ಯ ಎಂದು ಸಂತೈಸುತ್ತಾನೆ.

"ಇಂದ್ರಿಯ ಸುಖಗಳತ್ತ ಓಡುವ ಮನಸ್ಸಿಗೆ ಬಲವಾದ ಪೆಟ್ಟುಗಳನ್ನು ಕೊಡುತ್ತಲೇ ಇರಬೇಕು. ಹೀಗೆ ಪೆಟ್ಟುಗಳನ್ನು ತಿಂದ ಮನಸ್ಸು ತೆಪ್ಪಗಾಗಿ ಬಿಡುತ್ತದೆ" ಎಂದು ಪೂಜ್ಯ ಸ್ವಾಮಿ ಸೋಮನಾಥಾನಂದರು ತಮ್ಮ ಪ್ರವಚನಗಳಲ್ಲಿ ಆಗಿಂದಾಗ್ಗೆ ಹೇಳುತ್ತಿದ್ದರು. ವಿವೇಕದ ಮೂಲಕ, ನಿಷ್ಪಕ್ಷಪಾತವಾಗಿ ಮನಸ್ಸನ್ನು ವಿಶ್ಲೇಷಿಸುವುದರ ಮೂಲಕ, ಅದರ ದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುವುದರ ಮೂಲಕ ಮನಸ್ಸಿಗೆ ಪೆಟ್ಟು ಕೊಡಬೇಕು.

ಯದೀಚ್ಛಸಿ ವಶೀಕರ್ತುಂ ಜಗದೇಕೇನ ಕರ್ಮಣಾ ।
ಪರಾಪವಾದಸಸ್ಯೇಭ್ಯೋ ಗಾಂ ಚರಂತೀಂ ನಿವಾರಯ ॥

ಇಡೀ ಜಗತ್ತನ್ನು ನಿನ್ನ ವಶ ಮಾಡಿಕೊಳ್ಳಬೇಕೆಂಬ ಇಚ್ಛೆ ನಿನಗಿದ್ದರೆ ನೀನು ಮಾಡಬೇಕಾದ ಒಂದೇ ಒಂದು ಕಾರ್ಯವೆಂದರೆ ಪರನಿಂದೆ ಎಂಬ ಹೊಲದಲ್ಲಿ ನಿನ್ನ ಮನಸ್ಸೆಂಬ ಹಸುವನ್ನು ಮೇಯಲು ಬಿಡಬೇಡ.

ಆತ್ಮಜ್ಞಾನಿಗಳು ಸೃಷ್ಟಿಯಲ್ಲಿ ಹೊರಗೆ ಕಾಣುವ ನಾಮರೂಪಗಳನ್ನು ಪರಿಗಣಿಸದೆ ಅಧಿಷ್ಠಾನವಾಗಿರುವ ಆತ್ಮನನ್ನೆ ನೋಡುತ್ತಾರೆ. ಓತಪ್ರೋತವಾಗಿ ಎಲ್ಲೆಡೆ ವ್ಯಾಪಿಸಿರುವ ಏಕಮೇವ ಅದ್ವಿತೀಯವಾದ ಆತ್ಮದ ಅರಿವು ಸಮನಿಸಿದ ಬಳಿಕ ನಾನಾರು? ಇತರರಾರು? ಅಪರಿಚಿತರೆಲ್ಲಿ? ಆತ್ಮದರ್ಶಿಯು ಸರ್ವಭೂತ ಹಿತೇರತಃ, ವಿಶ್ವಪ್ರೇಮಿ. ಆತ್ಮದೃಷ್ಟಿಯುಳ್ಳವನಿಗೆ ಯಾರಲ್ಲೂ ಪ್ರತ್ಯೇಕವಾಗಿ ರಾಗವಾಗಲೀ ದ್ವೇಷವಾಗಲೀ ಇರುವುದು ಸಾಧ್ಯವಿಲ್ಲ. ಹಿಗ್ಗುಕುಗ್ಗುಗಳಿಗೆ ಆಧಾರವಾದ ಸುಖದುಃಖಗಳ ಜಂಜಾಟವಂತೂ ಇಲ್ಲವೇ ಇಲ್ಲ. ಇವನೇ ಸಮದರ್ಶಿ.

ಪೂರ್ವಜನ್ಮಗಳ ಪ್ರಾರಬ್ಧದ ಫಲವಾದ ಸಂಸ್ಕಾರಗಳ ಮತ್ತು ವಾಸನೆಗಳ ಸೆಳೆತಕ್ಕೆ ಸಿಕ್ಕಿ ಅಜ್ಞಾನದ ಸುಳಿಯಲ್ಲಿ ಬಿದ್ದು ತತ್ತರಿಸುತ್ತಿರುವ ಮಾನವರಲ್ಲಿ ತಪ್ಪುಗಳನ್ನು ಹುಡುಕುವುದು ಬಂಡೆಗೆ ತಲೆ ಚಚ್ಚಿದಷ್ಟೆ ಉಪಯೋಗ. ಲೋಕದ ಡೊಂಕನ್ನು ತಿದ್ದುವುದು ನಿನ್ನಿಂದಾಗದ ಕೆಲಸ ಎಂದಿದ್ದಾರೆ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು. ಇತರರ ತಪ್ಪುಗಳನ್ನೇ ಸದಾ ನೋಡುತ್ತ ನೋಡುತ್ತ ನಮ್ಮ ಮನಸ್ಸಿಗೂ ಆ ದೋಷಗಳು ತಗುಲಿಕೊಂಡು ಬಿಡುತ್ತವೆ. ಪರನಿಂದೆಗಿಂತ ಅತಿಶಯವಾದ ಪಾಪ ಬೇರೆ ಇಲ್ಲ ಎನ್ನುವ ಶಾಸ್ತ್ರಗಳು ಇದರಿಂದ ದೂರವಿರಲು ಎಚ್ಚರಿಸುತ್ತವೆ. ಪರನಿಂದೆಯಲ್ಲೇ ರಮಿಸುವವರು ಪರಮಾತ್ಮನಿಂದ ದೂರಸರಿಯಬೇಕಾಗುತ್ತದೆ.

ಇತರರ ದೋಷವನ್ನು ನೋಡುವುದರ ಬದಲು ನಮ್ಮ ದೋಷವನ್ನೇ ನಾವು ನೋಡಬೇಕು ಎಂದು ಹೇಳುತ್ತಾರೆ ಶ್ರೀಮಾತೆ ಶಾರದಾದೇವಿಯವರು. ಇತರರ ದೋಷ ನಮ್ಮಲ್ಲಿ ಅಸಹನೆಯನ್ನು ಉಂಟು ಮಾಡಿದರೆ ಆ ದೋಷ ನಮ್ಮಲ್ಲಿಯೇ ಇದೆ ಎಂದು ಅರ್ಥ. ತುಂಬ ದ್ವೇಷಭಾವನೆಯುಳ್ಳ ವ್ಯಕ್ತಿ ಎಲ್ಲರೂ ತನ್ನನ್ನು ದ್ವೇಷಿಸುತ್ತಾರೆಂದು ಭಾವಿಸುತ್ತಾನೆ. ಆಗ ಅವನು ತನ್ನ ದೋಷವನ್ನು ಅರಿಯದೆ ಎಲ್ಲರನ್ನೂ ದೂರುತ್ತಾ ಹೋಗುತ್ತಾನೆ. ಇಂತಹ ಸ್ವಭಾವದವರಿಗೆ ಮನಶ್ಶಾಂತಿ ಇಲ್ಲದಿರುವುದು ಮಾತ್ರವಲ್ಲದೆ ದೈಹಿಕವ್ಯಾಧಿಯಿಂದಲೂ ಅವರು ನರಳುತ್ತಾರೆ. ಶ್ರೀಮಾತೆಯವರ ಈ ಉಪದೇಶದಲ್ಲಿ ಮನಶ್ಶಾಸ್ತ್ರದ ಗಹನ ತತ್ತ್ವವಿದೆ.

ಶ್ರೀಮಾತೆಯವರ ಈ ಸಂದೇಶ ಒಮ್ಮೆ ಓದಿಯೋ ಕೇಳಿಯೋ ಮರೆತುಬಿಡುವಂತಹುದಲ್ಲ. ಆದರ್ಶ ಜೀವನವನ್ನು ನಡೆಸುತ್ತಾ ಮುಕ್ತಿಮಾತೆಯ ಮಡಿಲು ಸೇರಬೇಕೆಂದು ಆಶಿಸುವವರೆಲ್ಲರೂ ಈ ಸಂದೇಶದ ಮನನ-ನಿದಿಧ್ಯಾಸನ ಮಾಡಲೇಬೇಕು. ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು.

*